SCCH – 01
MVC No.1181/2025
PW1

**<u>ದಿನಾಂಕಃ 25.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಾದ ಶ್ರೀ.RA ರವರಿಂದಃ</u>**

1) ನನಗೆ ಇಬ್ಬರು ಮಕ್ಕಳು ಇದ್ದಾರೆ. ಈ ಪ್ರಕರಣವನ್ನು ನನ್ನ ಗಂಡನ ಮರಣದ ಸಂಬಂಧವಾಗಿ ನಾನು ಹಾಕಿದ್ದೇನೆ. ನನ್ನ ಮಕ್ಕಳನ್ನು ಈ ಪ್ರಕರಣದಲ್ಲಿ ಅರ್ಜಿದಾರರಾಗಿ ಸೇರಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

2) ಯಾವ ಅಪಘಾತದಲ್ಲಿ ನನ್ನ ಗಂಡನು ಗಾಯ ಗೊಂಡಿದ್ದಾರೋ ಮತ್ತು ಮರಣ ಹೊಂದಿದ್ದಾರೋ ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ 2 ರಲ್ಲಿ ನಾನು ಏನು ವಿಷಯಗಳನ್ನು ಬರೆಸಿದ್ದೇನೆ ಆ ವಿಷಯಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ.

3) ನನ್ನ ಗಂಡನು ನಡೆದುಕೊಂಡು ಹೋಗುತ್ತಾ ಇದ್ದಾಗ ಬುಲೆಟ್ ವಾಹನವು ಬಂದು ಅಪಘಾತ ಮಾಡಿದೆ ಎಂದು ನನಗೆ ತಿಳಿದು ಬಂದಿದೆ. ಯಾವ ರಸ್ತೆಯಲ್ಲಿ ಅಪಘಾತವು ಆಗಿದೆಯೋ ಸದರಿ ರಸ್ತೆಯ ಎರಡೂ ಬದಿಗಳಲ್ಲಿ ಪಾದಚಾರಿ ಮಾರ್ಗ (Footpath) ಇದೆ ಎಂದರೆ ಒಂದು ಕಡೆ ಮಾತ್ರ ಇದೆ.

4) ನಾನು ಹಾಜರುಪಡಿಸಿರುವಂತಹ ನಕ್ಷೆಯಲ್ಲಿ Footpath ಇರುವುದು ಕಂಡು ಬರುತ್ತದೆ ಎಂದರೆ ಸರಿ.

5) ಅಪಘಾತವು ಆದ ದಿನದಂದು ನನ್ನ ಗಂಡನು Footpath ನಲ್ಲಿ ನಡೆದುಕೊಂಡು ಹೋಗಿದ್ದ ಪಕ್ಷದಲ್ಲಿ ಯಾವುದೇ ಅಪಘಾತವು ಆಗುತ್ತಾ ಇರಲಿಲ್ಲ ಎಂದರೆ ಸುಳ್ಳು.

6) ಕೆಎ-05-ಎಲ್.ಟಿ-6044 ಸಂಖ್ಯೆಯ ವಾಹನದ ಚಾಲಕನ ವಿರುದ್ಧ ನಾವು

ಸುಳ್ಳು ಪ್ರಕರಣವನ್ನು ಮಾಡಿಸಿದ್ದೇವೆ ಮತ್ತು ನಮ್ಮ ಅನುಕೂಲಕ್ಕಾಗಿ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

7) ಅಪಘಾತವನ್ನು ಮಾಡಿದಂತಹ ವಾಹನದ ಚಾಲಕನೇ ನನ್ನ ಗಂಡನನ್ನು ಆಸ್ಪತ್ರೆಗೆ ಸೇರಿಸಿದ್ದಾರೆ ಎಂದರೆ ಆ ವ್ಯಕ್ತಿ ಮತ್ತು ಸಾರ್ವಜನಿಕರು ಸೇರಿಕೊಂಡು ನನ್ನ ಗಂಡನನ್ನು ಆಸ್ಪತ್ರೆಗೆ ಸೇರಿಸಿದ್ದಾರೆ.

8) ಸದರಿ ಬುಲೆಟ್ ವಾಹನವನ್ನು ಚಾಲನೆ ಮಾಡುತ್ತಾ ಇದ್ದಂತಹ ವ್ಯಕ್ತಿಯ ತಂದೆಯು ನಮ್ಮನ್ನು ಭೇಟಿ ಮಾಡಿದ್ದಾರೆ ಮತ್ತು ಆಸ್ಪತ್ರೆಯ ಖರ್ಚಿಗಾಗಿ 70 ಸಾವಿರ ರೂಪಾಯಿಗಳನ್ನು ನಮಗೆ ನೀಡಿದ್ದಾರೆ ಎಂದರೆ ಸುಳ್ಳು.

9) ಸಾಗರ್ ಆಸ್ಪತ್ರೆ ಮತ್ತು ದೇವೇಗೌಡ ಆಸ್ಪತ್ರೆಯಲ್ಲಿ ನನ್ನ ಗಂಡನಿಗೆ ಚಿಕಿತ್ಸೆ ಕೊಡಿಸಲಾಗಿದೆ ಎನ್ನುವ ಸಂಬಂಧ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

10) ಇಎಸ್ಐ ಆಸ್ಪತ್ರೆಯವರು ನನ್ನ ಗಂಡನಿಗೆ ಒಂದು ಕಾರ್ಡ್ ಕೊಟ್ಟಿದ್ದರು ಎಂದರೆ ಸರಿ.

11) ಇಎಸ್ಐ ಕಾರ್ಡ್ ಹೊಂದಿರುವಂತಹ ಜನರಿಗೆ ಮತ್ತು ನೌಕರರಿಗೆ ಇಎಸ್ಐ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆಯನ್ನು ಕೊಡಲಾಗುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಒಂದುವೇಳೆ ಇಎಸ್ಐ ಆಸ್ಪತ್ರೆಯಲ್ಲಿ ಔಷಧಿಗಳು ಇಲ್ಲದೇ ಇದ್ದರೆ ಅಂತಹ ಔಷಧಿಗಳನ್ನು ಹೊರಗಡೆಯಿಂದ ಖರೀದಿಸಬೇಕು" ಎಂದು ನುಡಿದಿದ್ದಾರೆ.

12) ಗಾಯಾಳುವಿಗೆ ಮತ್ತು ಆತನ ಜೊತೆ ಇರುವಂತಹ ಒಬ್ಬ ವ್ಯಕ್ತಿಗೆ ಇಎಸ್ಐ ಆಸ್ಪತ್ರೆಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ಕೊಡುತ್ತಾರೆ ಎಂದರೆ ರೋಗಿಗೆ

ಮಾತ್ರ ಊಟ ಕೊಡುತ್ತಾರೆ, ಬೇರೆಯವರಿಗೆ ಕೊಡುವುದಿಲ್ಲ.

13) ನನ್ನ ಗಂಡನಿಗೆ ಇಎಸ್ಐ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆಯನ್ನು ನೀಡಲಾಗಿದೆ, ಮತ್ತು ಚಿಕಿತ್ಸೆಗಾಗಿ ಐದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಾ ಇದ್ದೇನೆ ಎಂದರೆ ನನ್ನ ಗಂಡನು ಆಸ್ಪತ್ರೆಗೆ ಸೇರಿದಾಗಿನಿಂದ ಆತನ ತಿಥಿ ಕಾರ್ಯವನ್ನು ಮಾಡುವವರೆಗೆ ಅಷ್ಟು ಹಣ ಖರ್ಚು ಆಗಿದೆ.

14) ಸದರಿ ಅಪಘಾತದಲ್ಲಿ ನನ್ನ ಗಂಡನಿಗೆ ಕೇವಲ ಕಾಲಿಗೆ ಮಾತ್ರ ಗಾಯ ಆಗಿತ್ತು ಎಂದರೆ ತಲೆಗೆ ಮತ್ತು ಕೈಗಳಿಗೆ ಸಹಾ ಗಾಯಗಳು ಆಗಿದ್ದವು. ನನ್ನ ಗಂಡನಿಗೆ ಯಾವುದೇ ಮಾರಣಾಂತಿಕ ಗಾಯಗಳು ಆಗಿರಲಿಲ್ಲ ಎಂದರೆ ಸುಳ್ಳು.

15) ಇಎಸ್ಐ ಆಸ್ಪತ್ರೆಯವರು ನೀಡಿರುವಂತಹ ಡೆತ್ ಸಮ್ಮರಿಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ಅಪಘಾತವು ಆಗುವುದಕ್ಕಿಂತ ಮೊದಲು ನನ್ನ ಗಂಡನಿಗೆ ಹೃದಯದ ಸಮಸ್ಯೆ ಮತ್ತು ಇತರೆ ಆರೋಗ್ಯ ಸಮಸ್ಯೆಗಳು ಇದ್ದವು ಎಂದರೆ ಸುಳ್ಳು. ಹೃದಯದ ತೊಂದರೆ ಇಂದ ನನ್ನ ಗಂಡನ ಮರಣವು ಸಂಭವಿಸಿದೆ ಎಂಬುದಾಗಿ ನಿ.ಪಿ.7 ರಲ್ಲಿ ಬರೆಯಲಾಗಿದೆ ಎಂದರೆ ನನ್ನ ಗಂಡನನ್ನು ಆಪರೇಷನ್ ಗಾಗಿ ಕರೆದುಕೊಂಡು ಹೋದರು ಮತ್ತು ಆಗ ನನ್ನ ಗಂಡನಿಗೆ ಗಾಬರಿ ಆಗಿ ಮರಣ ಹೊಂದಿದರು.

16) ಅಪಘಾತದಲ್ಲಿ ಆದಂತಹ ಗಾಯಗಳ ಕಾರಣದಿಂದ ನನ್ನ ಗಂಡನು ಮರಣ ಹೊಂದಿರುವುದಿಲ್ಲ ಬದಲಿಗೆ ಅವರಿಗೆ ಇದ್ದಂತಹ ಹೃದಯದ ಕಾಯಿಲೆ ಮತ್ತು ಇತರೆ ಸಮಸ್ಯೆಗಳ ಕಾರಣದಿಂದ ಮರಣ ಹೊಂದಿದ್ದಾರೆ ಎಂದರೆ ಸುಳ್ಳು. ನನ್ನ ಗಂಡನು ಸೆಕ್ಯುರಿಟಿ ಕೆಲಸಕ್ಕೆ ಹೋಗುತ್ತಾ ಇದ್ದರು ಮತ್ತು ಅವರಿಗೆ ಒಂದು ತಿಂಗಳಿಗೆ 25 ಸಾವಿರ ರೂಪಾಯಿ ಸಂಬಳ ಬರುತ್ತಾ ಇತ್ತು ಎಂಬ ಬಗ್ಗೆ ನಾನು ಯಾವುದೇ

ದಾಖಲೆಯನ್ನು ಹಾಜರು ಮಾಡಿರುವುದಿಲ್ಲ.

17) ನಾನು ಹೇಳಿದ ಹಾಗೆ ನನ್ನ ಗಂಡನು ಯಾವುದೇ ಕೆಲಸ ಮಾಡುತ್ತಾ ಇರಲಿಲ್ಲ ಮತ್ತು ಆತನಿಗೆ ಯಾವುದೇ ಸಂಬಳ ಬರುತ್ತಾ ಇರಲಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಾ ಇದ್ದೇನೆ ಎಂದರೆ ಸುಳ್ಳು.

18) ಇಎಸ್‌ಐ ಸಂಸ್ಥೆಯಿಂದ ನಮಗೆ ಯಾವುದೇ ಪರಿಹಾರದ ಹಣ ಬಂದಿರುವುದಿಲ್ಲ.

**ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.